**<u>ಅಸಲು ದಾವಾ ಸಂಖ್ಯೆ - 181/2023</u>** **ಪಿ.ಡಬ್ಲ್ಯೂ:-2**

ದಿನಾಂಕಃ **06-08-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ವಾದಿಯು ಈ ದಾವೆಯನ್ನು ಯಾವ ವಿಚಾರಕ್ಕೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತು. ಪರಮೇಶ್ವರಪ್ಪ ಮತ್ತು ಅವರ ಮಕ್ಕಳ ಜಮೀನಿನಲ್ಲಿ ಒತ್ತುವರಿ ಆಗಿದೆ ಎಂದು ದಾವೆಯನ್ನು ಸಲ್ಲಿಸಿದ್ದಾರೆ. ಸರ್ವೇ ನಂ.1 ರ ಆಸ್ತಿಗೆ ಸಂಬಂಧಪಟ್ಟಂತೆ ದಾವೆಯನ್ನು ಸಲ್ಲಿಸಿದ್ದಾರೆ. ದಾವಾ ಆಸ್ತಿಯು 4 ½ ಎಕರೆ ಜಮೀನು ಇರಬಹುದು. ದಾವಾ ಆಸ್ತಿಯ ಪೂರ್ವಕ್ಕೆ ಊರು, ಪಶ್ಚಿಮಕ್ಕೆ ಚಾನಲ್, ಉತ್ತರಕ್ಕೆ ಪರಮೇಶ್ವರಪ್ಪರವರ ಜಮೀನು, ದಕ್ಷಿಣಕ್ಕೆ ಉಂಬಳಿ ಜಮೀನು. ದಾವಾ ಆಸ್ತಿಯ ಸುತ್ತ ಮುತ್ತ ನನಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ. ನಮ್ಮ ಮನೆಯಿಂದ ವಾದಿಯ ದಾವಾ ಆಸ್ತಿಗೆ ಸುಮಾರು 100-200 ಮೀ ಅಂತರವಿರುತ್ತದೆ. 1 ನೇ ಪ್ರತಿವಾದಿಯ ಜಮೀನು ನಮ್ಮ ಮನೆಯಿಂದ 300 ಮೀ. ಅಂತರದಲ್ಲಿರುತ್ತದೆ. ಸರ್ವೇಯನ್ನು ಸರ್ವೇ ಅಧಿಕಾರಿಗಳು 2018 ನೇ ಸಾಲಿನಲ್ಲಿ ಮಾಡಿರುತ್ತಾರೆ. ಆದರೆ ನಿರ್ದಿಷ್ಟವಾದ ದಿನಾಂಕ ಮತ್ತು ತಿಂಗಳುನನಗೆ ನೆನಪಿಲ್ಲ. ಸರ್ವೇ ಅಧಿಕಾರಿಗಳು ಸರ್ವೇ ಮಾಡಿದಾಗ ಒತ್ತುವರಿಯಾಗಿರುವ ಬಗ್ಗೆ ತಿಳಿದಿರುತ್ತದೆ. ಸರ್ವೇಯ ಸಮಯದಲ್ಲಿ ನಾನು ಮಹಜರ್ ಗೆ ಯಾವುದೇ ಸಹಿಯನ್ನು ಮಾಡಿರುವುದಿಲ್ಲ. ವಾದಿಯ ಜಮೀನು ಒತ್ತುವರಿ ಆಗದಿದ್ದರೂ ಸಹ ಒತ್ತುವರಿ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ ವಾದಿಯ ಮಾತುಕೇಳಿಕೊಂಡು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳು ನನ್ನ ಜೊತೆ

ಅನ್ಯೋನ್ಯವಾಗಿದ್ದಾರೆ. ವಾದಿಯು ನನ್ನ ಜೊತೆ ಅನ್ಯೋನ್ಯವಾಗಿದ್ದರಿಂದ ಅವರ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.